KAKB320029192025

Presented on : 04-11-2025
Registered on : 04-11-2025
Decided on : 24-06-2026
Duration : 00 years/ 07 months/ 20 days.

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಅಫಜಲಪೂರ.**

**ಉಪಸ್ಥಿತರುಃ**

**ಶ್ರೀ ಅನಿಲ ಅಮಾತೆ**
ಬಿ.ಎ.ಎಲ್.ಎಲ್.ಬಿ. (Hon's).,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಅಫಜಲಪೂರ.

**ಸಿ.ಸಿ.ನಂ.1479/2025**

ದಿನಾಂಕಃ 24 ನೇ ಜೂನ್-2026 ರಂದು

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ಅಫಜಲಪೂರ ಪೊಲೀಸರಿಂದ)
**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿ/ತರು:** **ಎ4**. ಲಕ್ಷ್ಮಣ ತಂದೆ ಶಾಮ ಸಿಂಧೆ,
ವಃ 33 ವರ್ಷ, ಉಃ ಖಾಸಗಿ ಕೆಲಸ,
ವಾಸಃ ಉಡಚಾಣ ಗ್ರಾಮ , ತಾಃ ಅಫಜಲಪೂರ,
ಜಿಃ ಕಲಬುರಗಿ. **(Spilt-up)**

(ಆರೋಪಿತನ ಪರ ಶ್ರೀಮತಿ. ಎಂ.ಕೆ.ಪಿ. ವಕೀಲರು)

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 09.05.2022 |

| | | | |
|---|---|---|---|
| 2. | ಪ್ರಕರಣ ದಾಖಲಾದ ದಿನಾಂಕ | : | 09.05.2022 |
| 3. | ಆರೋಪಿತನನ್ನು ಬಂಧಿಸಿದ ದಿನಾಂಕ. | : | -- |
| 4. | ಫಿರ್ಯಾದಿದಾರರ ಹೆಸರು | : | ಶ್ರೀ ಭೀಮಶ್ಯಾ ಕ್ಷತ್ರಿ |
| 5. | ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ | : | 11.06.2026 |
| 6. | ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ | : | 11.06.2026 |
| 7. | ಅಪಾದನೆಗಳು | : | ಭಾ.ದಂ.ಸಂ.ಕಲಂ.341, 323, 324, 504, 506 ಸಹವಾಚಕ ಕಲಂ.34 ರಡಿಯಲ್ಲಿ |
| 8. | ನ್ಯಾಯಾಧೀಶರ ತೀರ್ಮಾನ | : | ಅಂತಿಮ ಆದೇಶದಂತೆ |

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

**ತೀರ್ಪು**

ಆರಕ್ಷಕ ಉಪನಿರೀಕ್ಷಕರು ಅಫಜಲಪೂರ ಪೊಲೀಸ್ ಠಾಣೆ, ಇವರು 4ನೇ ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ.341, 323, 324, 504,

506 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಳಿಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-**

ಅಫಜಲಪೂರ ತಾಲೂಕಿನ ಮಾಶಾಳ ಗ್ರಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಕ್ಷತ್ರೀ ಸಮಾಜದ ವತಿಯಿಂದ ಎಲ್ಲರೂ ಆಗ್ಗಿನಾಥ ಮಹಾರಾಜರ ಜಾತ್ರೆ ಆಚರಿಸುತ್ತಾ ಬಂದಿದ್ದು, ಈ ವರ್ಷ ಅಂದರೆ ದಿನಾಂಕಃ 06.05.2022 ರಂದು ಅಗ್ಗಿನಾಥ ಮಹಾಜರಾಜರ ಜಾತ್ರೆಯನ್ನು ತಮ್ಮ ಸಮಾಜದವರು ಎಲ್ಲರೂ ಸೇರಿ ಆಚರಿಸಿದ್ದು, ಅಂದು 2ನೇ ಆರೋಪಿತನ ಮಗನಾದ 1ನೇ ಆರೋಪಿ ದತ್ತಾತ್ರೇಯ ಇತನು ಬಂದು ನಮಗೆ ಜಾತ್ರೆ ಮಾಡಲು ಕರೆದಿರುವುದಿಲ್ಲ ಅಂತಾ ತಕರಾರು ಹಿನ್ನಲೆಯಲ್ಲಿ ದಿನಾಂಕಃ 09.05.2022 ರಂದು ರಾತ್ರಿ 07-00 ಗಂಟೆಯ ಸುಮಾರಿಗೆ ಫಿರ್ಯಾದಿ ಚಾಸಾ-1 ಭೀಮಶ್ಯಾ ರವರು ತಮ್ಮ ಮನೆಯ ಮುಂದುಗಡೆ ನಡೆದುಕೊಂಡು ಹೋಗುತ್ತಿರುವಾಗ, 2ನೇ ಆರೋಪಿತನು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರಿಗೆ ಅಕ್ರಮವಾಗಿ ತಡೆದು ನಿಲ್ಲಿಸಿದ್ದು, 2ನೇ ಆರೋಪಿತನು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರಿಗೆ "ಏ ಭೋಸಡಿ ಮಗನೆ ನಿಂದು ಬಹಳ ಆಗ್ಯಾದ, ಊರಾನ ನಮ್ಮ ಸಮಾಜದ ಜಾತ್ರಿ ಟೈಮದಾಗ ನಮ್ಮ ಮನಿಯವರಿಗೆ ಊಟಕ್ಕೆ ಹೇಳಿಲ್ಲ" ಅಂತಾ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ 1ನೇ ಆರೋಪಿತನು ಈ ರಂಡೀ ಮಗನಿಗೆ ಇವತ್ತು ಸುಮ್ಮನೇ

ಬಿಡುವದು ಬೇಡ ಅಂತಾ ಅನ್ನುತಾ ಅಲ್ಲೆ ಬಿದ್ದಿದ್ದ ಬಡಿಗೆ ತಗೆದುಕೊಂಡು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರ ಎಡಗೈ ಭುಜಕ್ಕೆ ಹಾಗೂ ಬೆನ್ನಿಗೆ ಹೊಡೆದು ಗುಪ್ತಗಾಯವನ್ನುಂಟು ಮಾಡಿರುತ್ತಾನೆಂದು ಹಾಗೂ 4ನೇ ಆರೋಪಿತನು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರ ಎರಡು ಕೈ ಹಿಂದುಗಡೆ ಹಿಡಿದುಕೊಂಡಾಗ, 2ನೇ ಆರೋಪಿತನ ಮಗನಾದ 3ನೇ ಆರೋಪಿ ಶ್ರೀಶೈಲ ರವರು ತನ್ನ ಕೈಯಿಂದ ಚಾಸಾ-1 ರವರ ಹೊಟ್ಟೆಗೆ ಹಾಗೂ ಬೆನ್ನಿನ ಮೇಲೆ ಹೊಡೆದು ಗುಪ್ತಗಾಯಪಡಿಸಿದ್ದು, ಸದರಿ ಜಗಳವನ್ನು ಪ್ರತ್ಯಕ್ಷವಾಗಿ ನೋಡಿದ ಚಾಸಾ-4 ಮತ್ತು 5 ರವರು ಬಂದು ಜಗಳ ಬಿಡಿಸಿ ಕಳುಹಿಸುತ್ತಿರುವಾಗ, ಸದರಿ ಆರೋಪಿತರೆಲ್ಲರೂ ಅಲ್ಲಿಂದ ಹೋಗುವಾಗ ಫಿರ್ಯಾದಿ ಚಾಸಾ-1 ಭೀಮಶ್ಯಾ ರವರಿಗೆ ಇನ್ನು ಮುಂದೆ ನಡೆಯುವ ನಮ್ಮ ಸಮಾಜದ ಜಾತ್ರಿದಾಗ ನಮ್ಮೆಲ್ಲರಿಗೆ ಊಟಕ್ಕೆ ಕರೆಯೋದು ನೆನಪು ಇಟ್ಟುಕೋ ಇಲ್ಲಾ ಅಂದ್ರಾ ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿರುತ್ತಾರೆಂದು ಸದರಿ ಆರೋಪಿತರ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಅಫಜಲಪೂರ ಪೊಲೀಸರು ತಮ್ಮ ಠಾಣಾ ಗುನ್ಹಾ ನಂ.99/2022 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ 4ನೇ ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ. 341, 323, 324, 504,

506 ಸಹವಾಚಕ ಕಲಂ.34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು 4ನೇ ಆರೋಪಿತನ ವಿರುದ್ದ ಸಮನ್ಸ ಜಾರಿ ಮಾಡಿ, 4ನೇ ಆರೋಪಿತನ ಹಾಜರಾತಿಯನ್ನು ಪಡೆಯಲಾಯಿತು. ನಂತರ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು 4ನೇ ಆರೋಪಿತನಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504, 506 ಸಹವಾಚಕ ಕಲಂ.34 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ 4ನೇ ಆರೋಪಿತನಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು 4ನೇ ಆರೋಪಿತನ ವಿರುದ್ದ ಅಪಾದಿಸಿದ ಮೇಲಿನ ಅಪರಾಧಗಳನ್ನು ಸಾಬೀತು ಪಡಿಸಲು ಪ್ರಾಸಾ-1 ರವರ ಸಾಕ್ಷಿ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಮತ್ತು ಚಾಸಾ-2 ರಿಂದ 7 ರವರ ಸಾಕ್ಷ್ಯಗಳನ್ನು ಕೈಬಿಡಲಾಗಿದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ-1 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು

ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ಪಿ.ಡಬ್ಲ್ಯೂ-1 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ, ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ 4ನೇ ಆರೋಪಿತನ ಹೇಳಿಕೆಯನ್ನು ಕೈಬಿಡಲಾಗಿದೆ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ಅಫಜಲಪೂರ ತಾಲೂಕಿನ ಮಾಶಾಳ ಗ್ರಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಕ್ಷತ್ರೀ ಸಮಾಜದ ವತಿಯಿಂದ ಎಲ್ಲರೂ ಆಗ್ಗಿನಾಥ ಮಹಾರಾಜರ ಜಾತ್ರೆ ಆಚರಿಸುತ್ತಾ ಬಂದಿದ್ದು, ಈ ವರ್ಷ ಅಂದರೆ ದಿನಾಂಕಃ 06.05.2022 ರಂದು ಅಗ್ಗಿನಾಥ ಮಹಾಜರಾಜರ ಜಾತ್ರೆಯನ್ನು ತಮ್ಮ ಸಮಾಜದವರು ಎಲ್ಲರೂ ಸೇರಿ ಆಚರಿಸಿದ್ದು, ಅಂದು 2ನೇ ಆರೋಪಿತನ ಮಗನಾದ 1ನೇ ಆರೋಪಿ ದತ್ತಾತ್ರೇಯ ಇತನು ಬಂದು ನಮಗೆ ಜಾತ್ರೆ ಮಾಡಲು ಕರೆದಿರುವುದಿಲ್ಲ ಅಂತಾ ತಕರಾರು ಹಿನ್ನಲೆಯಲ್ಲಿ ದಿನಾಂಕಃ 09.05.2022 ರಂದು ರಾತ್ರಿ 07-00 ಗಂಟೆಯ ಸುಮಾರಿಗೆ ಫಿರ್ಯಾದಿ ಚಾಸಾ-1 ಭೀಮಶ್ಯಾ ರವರು ತಮ್ಮ ಮನೆಯ ಮುಂದುಗಡೆ ನಡೆದುಕೊಂಡು ಹೋಗುತ್ತಿರುವಾಗ, 4ನೇ ಆರೋಪಿತನು ವಿಭಜನೆಗೊಂಡ 1 ರಿಂದ 3ನೇ ಆರೋಪಿತರ ಜೊತೆಗೆ ಕೂಡಿಕೊಂಡು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರಿಗೆ ಅಕ್ರಮವಾಗಿ ತಡೆದು ನಿಲ್ಲಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 4ನೇ ಆರೋಪಿತನು ವಿಭಜನೆಗೊಂಡ 1 ರಿಂದ 3ನೇ ಆರೋಪಿತರ ಜೊತೆಗೆ ಕೂಡಿಕೊಂಡು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರಿಗೆ "ಏ ಭೋಸಡಿ ಮಗನೆ ನಿಂದು ಬಹಳ ಆಗ್ಯಾದ, ಊರಾನ ನಮ್ಮ ಸಮಾಜದ ಜಾತ್ರಿ ಟೈಮದಾಗ ನಮ್ಮ ಮನಿಯವರಿಗೆ ಊಟಕ್ಕೆ ಹೇಳಿಲ್ಲ" ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 4ನೇ ಆರೋಪಿತನು ವಿಭಜನೆಗೊಂಡ 1 ರಿಂದ 3ನೇ ಆರೋಪಿತರ ಜೊತೆಗೆ ಕೂಡಿಕೊಂಡು ಈ ರಂಡೀ ಮಗನಿಗೆ ಇವತ್ತು ಸುಮ್ಮನೇ ಬಿಡುವದು ಬೇಡ ಅಂತಾ ಅನ್ನುತಾ ಅಲ್ಲೆ ಬಿದ್ದಿದ್ದ ಬಡಿಗೆ ತಗೆದುಕೊಂಡು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರ ಎಡಗೈ ಭುಜಕ್ಕೆ ಹಾಗೂ ಬೆನ್ನಿಗೆ ಹೊಡೆದು ಗುಪ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 4ನೇ ಆರೋಪಿತನು ವಿಭಜನೆಗೊಂಡ 1 ರಿಂದ 3ನೇ ಆರೋಪಿತರ ಜೊತೆಗೆ ಕೂಡಿಕೊಂಡು ಫಿರ್ಯಾದಿ ಚಾಸಾ-1 ಭೀಮಶ್ಯಾ ರವರ ಎರಡು ಕೈ ಹಿಂದುಗಡೆ ಹಿಡಿದುಕೊಂಡಾಗ, 2ನೇ ಆರೋಪಿತನ ಮಗನಾದ 3ನೇ ಆರೋಪಿ ಶ್ರೀಶೈಲ ರವರು ತನ್ನ ಕೈಯಿಂದ ಚಾಸಾ-1 ರವರ ಹೊಟ್ಟೆಗೆ ಹಾಗೂ ಬೆನ್ನಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ

ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಜಗಳವನ್ನು ಪ್ರತ್ಯಕ್ಷವಾಗಿ ನೋಡಿದ ಚಾಸಾ-4 ಮತ್ತು 5 ರವರು ಬಂದು ಜಗಳ ಬಿಡಿಸಿ ಕಳುಹಿಸುತ್ತಿರುವಾಗ, 4ನೇ ಆರೋಪಿತನು ವಿಭಜನೆಗೊಂಡ 1 ರಿಂದ 3ನೇ ಆರೋಪಿತರ ಜೊತೆಗೆ ಕೂಡಿಕೊಂಡು ಅಲ್ಲಿಂದ ಹೋಗುವಾಗ ಫಿರ್ಯಾದಿ ಚಾಸಾ-1 ಭೀಮಶ್ಯಾ ರವರಿಗೆ "ಇನ್ನು ಮುಂದೆ ನಡೆಯುವ ನಮ್ಮ ಸಮಾಜದ ಜಾತ್ರಿದಾಗ ನಮ್ಮೆಲ್ಲರಿಗೆ ಊಟಕ್ಕೆ ಕರೆಯೋದು ನೆನಪು ಇಟ್ಟುಕೋ ಇಲ್ಲಾ ಅಂದ್ರಾ ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

6. ಯಾವ ಆದೇಶ ಅಥವಾ ಶಿಕ್ಷೆ?

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

| | | |
|---|---|---|
| ಅಂಶ ನಂ.1 ರಿಂದ 5 | : | ನಕರಾತ್ಮಕವಾಗಿ. |
| ಅಂಶ ನಂ.6 | : | ಅಂತಿಮ ಆದೇಶದಂತೆ<br>ಈ ಕೆಳಕಂಡ ಕಾರಣಗಳಿಗಾಗಿ |

**<u>ಕಾ ರ ಣ ಗ ಳು</u>**

10. **<u>ಅಂಶ ನಂ.1 ರಿಂದ 5:-</u>** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು 4ನೇ ಆರೋಪಿತನ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-1 ಭೀಮಶ್ಯಾ ತಂದೆ ರಾಮು, ಇವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ-1 ರವರು ಈ ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-4 ಮತ್ತು 5 ಪರಿಚಯ ಇರುತ್ತಾರೆ. ಆರೋಪಿ ತನ್ನ ಅಣ್ಣನ ಅಳಿಯ ಆಗಬೇಕು. ತನ್ನ ಮತ್ತು ಆರೋಪಿತರ ನಡುವೆ ಸುಮಾರು 4-5 ವರ್ಷಗಳ ಹಿಂದೆ ಬಾಯಿ ಮಾತಿನ ಜಗಳವಾಗಿದ್ದು ಸಿಟ್ಟಿನ ಭರದಲ್ಲಿ ತಾನು ಒಂದು ದೂರನ್ನು ನೀಡಿರುತ್ತೇನೆ. ಆದರೆ ಅದರಲ್ಲಿ ಏನು ಬರೆದಿದೆ ಅಂತ ತನಗೆ ಗೊತ್ತಿಲ್ಲವೆಂದು ಹಾಗೂ 4ನೇ ಆರೋಪಿತನು ತನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆ ಬಡೆ ಮಾಡಿಲ್ಲ, ಜೀವ ಬೆದರಿಕೆ ಹಾಕಿಲ್ಲವೆಂದು ಹಾಗೂ ತನಗೆ ಈ ಪ್ರಕರಣದ ಕುರಿತು ತನಗೆ ಯಾವುದೇ ಮಾಹಿತಿ ಇಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ತಮ್ಮ ಸಾಕ್ಷ್ಯ ನುಡಿದಿರುತ್ತಾರೆ.

12. ಸದರಿ ಪಿ.ಡಬ್ಲ್ಯೂ-1 ರವರನ್ನು ಮಾನ್ಯ ಸ.ಸ.ಅ ರವರು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಆದರೆ ಪಿ.ಡಬ್ಲ್ಯೂ-1 ರವರ ಕಡೆಯಿಂದ ಅಭಿಯೋಜನೆಗೆ ಪೂರಕವಾಗುವಂತೆ 4ನೇ ಆರೋಪಿತನ ವಿರುದ್ದ ಆಪಾದಿಸಿದ ದೋಷಾರೋಪಣೆಗೆ ಪೂರಕವಾಗಿ ಯಾವುದೇ ಅಂಶಗಳನ್ನು ಪಡೆದಿರುವುದಿಲ್ಲ. ಪಿ.ಡಬ್ಲ್ಯೂ-1 ರವರು ಈ ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾಗಿದ್ದು ಇವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪಿ.ಡಬ್ಲ್ಯೂ-1 ರವರು

ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸ.ಸ.ಅ ರವರು ಇತರೇ ಸಾಕ್ಷಿಗಳಿಗೆ ಸಾಕ್ಷ್ಯದ ಸಮನ್ಸಗಳನ್ನು ಹೊರಡಿಸುವಂತೆ ಮಾಡಿದ ಮನವಿಯನ್ನು ತಿರಸ್ಕರಿಸಲಾಗಿದೆ. ಆದಾಗ್ಯೂ ಒಂದು ವೇಳೆ ಇತರೆ ಚಾ.ಸಾ. ಸಾಕ್ಷಿದಾರರಿಗೆ ಸಮನ್ಸನ್ನು ಜಾರಿ ಮಾಡಿದ್ದರೂ ಸಹ, ಪಿ.ಡಬ್ಲ್ಯೂ -1 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜನೆಯ ಪ್ರಕರಣವನ್ನು ಸಾಭೀತುಪಡಿಸಲು ಅನುಕೂಲವಾಗಿರುವುದಿಲ್ಲ. ಅಲ್ಲದೆ ಸದರಿ ಸಾಕ್ಷಿದಾರರಿಗೆ ಸಮನ್ಸನ್ನು ನೀಡುವುದರಿಂದ ನ್ಯಾಯಾಲಯದ ಮತ್ತು ಇತರೇ ಸಾಕ್ಷಿದಾರರ ಅಮೂಲ್ಯ ಸಮಯ ಹಾಳಾಗುವುದೇ ಹೊರತು ಅಭಿಯೋಜನೆಗೆ ಯಾವುದೇ ರೀತಿಯ ಅನುಕೂಲವಾಗಿರುವುದಿಲ್ಲ. ಅಲ್ಲದೆ ಸರ್ಕಾರಿ ಹೊರೆಯು ಸಹ ಆಗುವುದರಿಂದ ಸದರಿ ಮಾನ್ಯ ಸ.ಸ.ಅ ರವರ ಮನವಿಯನ್ನು ತಿರಸ್ಕರಿಸಿದ್ದು ಇರುತ್ತದೆ.

13. ಪಿ.ಡಬ್ಲ್ಯೂ -1 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜನೆಯ ಪ್ರಕರಣವು ಸಂಶಯಾತೀತವಾಗಿ ಇರುವುದಿಲ್ಲ ಮತ್ತು ಅಭಿಯೋಜನೆಯು 4ನೇ ಆರೋಪಿತನ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತದೆ ಎಂದು ಹೇಳಬಹುದು. ಆದ್ದರಿಂದ ಕಾನೂನಿನ ನಿರ್ಧರಿತ ತತ್ವಗಳಂತೆ ಅಭಿಯೋಜನೆಯ ಪ್ರಕರಣದಲ್ಲಿ ಸಂಶಯವಿದ್ದಲ್ಲಿ, ಸದರಿ ಸಂಶಯದ ಲಾಭವನ್ನು 4ನೇ ಆರೋಪಿತನಿಗೆ ಸಲ್ಲತಕ್ಕದ್ದು. ಸದರಿ ಪ್ರಕರಣದ ವಸ್ತುಸ್ಥಿತಿಯನ್ನು ಪರಿಶೀಲಿಸಿದಾಗ, ಅಭಿಯೋಜನೆಯು

4ನೇ ಆರೋಪಿತನ ವಿರುದ್ಧ ಭಾ.ದಂ.ಸಂಹಿತೆ ಕಲಂ.341, 323, 324, 504, 506 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತಾರೆಂಬುದನ್ನು ಸಂಶಯಾತಿತವಾಗಿ ಸಾಭೀತು ಪಡಿಸುವಲ್ಲಿ ವಿಫಲವಾಗಿರುತ್ತದೆ ಎಂದು ಅಂಶ ನಂ.1 ರಿಂದ 5 ನೇದ್ದವುಗಳನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

14. **ಅಂಶ ನಂ.6 :-** ಅಂಶ ನಂ.1 ರಿಂದ 5 ನೇದ್ದವುಗಳನ್ನು ನಕರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

**ಆ ದೇ ಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ. 248(1) ರನ್ವಯ ಪ್ರದತ್ತವಾದ ಅಧಿಕಾರ ಬಳಸಿ 4ನೇ ಆರೋಪಿತನನ್ನು ಭಾರತೀಯ ದಂಡ ಸಂಹಿತೆಯ ಕಲಂ. 341, 323, 324, 504, 506 ಸಹವಾಚಕ ಕಲಂ.34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿಯೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

4ನೇ ಆರೋಪಿತನನ್ನು ನ್ಯಾಯಾಲಯಕ್ಕೆ ಬರೆದುಕೊಟ್ಟ ವಯಕ್ತಿಕ ಮುಚ್ಚಳಿಕೆ ಹಾಗೂ ಜಾಮೀನುದಾರರು ಬರೆದುಕೊಟ್ಟ

ಮುಚ್ಚಳಿಕೆಯನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ. 437(ಎ) ರನ್ವಯ ಇಂದಿನಿಂದ 6 ತಿಂಗಳವರೆಗೆ ಮುಂದುವರೆಸಲಾಗಿರುತ್ತದೆ.

ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿದ ಕಾಲಂ.ನಂ.11 ರಲ್ಲಿರುವ ಒಂದು ಬಡಿಗೆ ಯಾವುದೇ ಮೌಲ್ಯ ಹೊಂದಿರದ ವಸ್ತು ಆಗಿರುವುದರಿಂದ, ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 24ನೇ ಜೂನ್ -2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಅನಿಲ ಅಮಾತೆ )**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

**ಅನುಬಂಧ**

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

ಪಿ.ಡಬ್ಲ್ಯೂ -1 : ಭೀಮಶ್ಯಾ ತಂದೆ ರಾಮು

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ನಿ.ಪಿ.1 : ಪ್ರಾಸಾ-1 ರವರ ದೂರು

ನಿ.ಪಿ.1(ಎ) : ಪ್ರಾಸಾ-1 ರವರ ಸಹಿ

**ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

- ಇಲ್ಲ -

**ಆರೋಪಿತನ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

- ಇಲ್ಲ -

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು
ಅಫಜಲಪೂರ.

Visit **ecourts.gov.in** for updates or download mobile app “**eCourts Services**” from Android or iOS